# ಸ್ವಸ್ಥಾನ ಪ್ರಜ್ಞೆ

**ಈ** ಸೃಷ್ಟಿಯಲ್ಲಿ ಎಲ್ಲ ಚರಾಚರ ವಸ್ತುಗಳಿಗೂ ಅವುಗಳದೇ ಆದ ನಿರ್ದಿಷ್ಟ ಸ್ಥಾನಗಳನ್ನು ಪ್ರಕೃತಿ ನಿಷ್ಕರ್ಷಿಸಿದೆ. ಮರ ಗಿಡ ಬಳ್ಳಿ, ಬೆಟ್ಟ, ನದಿ, ಕಡಲು, ಮರುಭೂಮಿ, ಅಗ್ನಿಪರ್ವತ– ಇಂಥ ಅಚೇತನ ಘಟಕಗಳಿರಬಹುದು; ಕ್ರಿಮಿ ಕೀಟ, ಪ್ರಾಣಿ, ಪಕ್ಷಿ, ಮನುಷ್ಯ ಮುಂತಾದ ಜೀವಿಗಳಿರಬಹುದು. ಇವೆಲ್ಲವೂ ಪ್ರಕೃತಿ ದತ್ತವಾದ ತಮ್ಮ ತಮ್ಮ ಸ್ಥಾನಗಳಲ್ಲಿದ್ದಾಗ ಮಾತ್ರ ಸೃಷ್ಟಿಯಲ್ಲೊಂದು ಸಮತೋಲನ ಉಳಿದುಕೊಂಡಿರುತ್ತದೆ. ಸೃಷ್ಟಿಯಲ್ಲಿನ ಯಾವುದಾದರೊಂದು ತನ್ನ ಸ್ಥಾನ ಪ್ರಜ್ಞೆಯನ್ನು ಕಳೆದುಕೊಂಡು, ಅತಿಕ್ರಮಣ ಅಥವಾ ಆಕ್ರಮಣದಲ್ಲಿ ತೊಡಗಿದರೆ, ಪ್ರಕ್ಷುಬ್ಧತೆ ಕಾಣಿಸಿಕೊಳ್ಳುತ್ತದೆ. ಸಮುದ್ರ ತನ್ನ ಎಲ್ಲೆಮೀರಿ ಭೂಮಿಯೊಳಕ್ಕೆ ನುಗ್ಗಿದರೆ, ಬೆಟ್ಟವೋ, ಪರ್ವತವೋ ತನ್ನ ಸ್ಥಾನ ಬಿಟ್ಟು ಚಲಿಸುತ್ತಾ ಮುಂದೆ ಬಂದರೆ, ಕಾಡು ಜನವಸತಿ ಪ್ರದೇಶಗಳನ್ನು ಆಕ್ರಮಿಸಿದರೆ, ಅಥವಾ ಮರುಭೂಮಿ ಮೇರೆ ಮೀರಿ, ವಿಸ್ತೃತಗೊಳ್ಳುತ್ತಾ ಹೋದರೆ ಏನೆಲ್ಲ ಅನಾಹುತಗಳಾದೀತೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಹೀಗೆಯೇ ಜೀವ ಜಗತ್ತಿನಲ್ಲೂ, ಕಾಡಿನಲ್ಲಿರಬೇಕಾದ ಪ್ರಾಣಿಗಳು ಸ್ಥಾನ ಪರಿವೆಯಿಲ್ಲದೆ ಊರೊಳಗೆ ನುಗ್ಗಿ ಬಂದರೆ, ಊರಲ್ಲಿರಬೇಕಾದ ಮನುಷ್ಯರು ಕಾಡುಗಳನ್ನು ಸೇರಿಕೊಂಡರೆ ಪ್ರಕೃತಿಯಲ್ಲಿ ಏರುಪೇರುಂಟಾಗಿ ನಿಸರ್ಗದ ವ್ಯವಸ್ಥೆಗೆ ಧಕ್ಕೆಯುಂಟಾಗುತ್ತದೆ.

ಮನುಷ್ಯ ಜಗತ್ತಿನ ಸಂದರ್ಭದಲ್ಲಿ, ಸ್ವಸ್ಥಾನ ಪ್ರಜ್ಞೆಯೆಂಬುದು ನೈಸರ್ಗಿಕವಾಗಿ ಬರುವಂಥದಲ್ಲ; ಮನುಷ್ಯ ಸ್ವತಃ ಪ್ರಜ್ಞಾಪೂರ್ವಕವಾಗಿ ರೂಢಿಸಿಕೊಳ್ಳಬೇಕಾಗಿರುವಂಥದು. ಮನುಷ್ಯನ ಸಂಸ್ಕೃತಿಯನ್ನು ನಿರ್ಧರಿಸುವ ಅನೇಕ ಸಂಗತಿಗಳಲ್ಲಿ ಸ್ವಸ್ಥಾನ ಪ್ರಜ್ಞೆಯೂ ಒಂದು. ಸಮಾಜದ ಸ್ವಾಸ್ಥ್ಯಕ್ಕೂ ಇದು ತುಂಬ ಅಗತ್ಯ. ಮಾನವ ಸಮಾಜದಲ್ಲಿ ಒಬ್ಬೊಬ್ಬ ವ್ಯಕ್ತಿಯೂ ಇನ್ನೊಬ್ಬನಿಗಿಂತ ಭಿನ್ನ. ಆದ್ದರಿಂದಲೇ ಪ್ರತಿಯೊಬ್ಬನಿಗೂ ಸಮಾಜದಲ್ಲಿ ಅವನದೇ ಆದ ಪ್ರತ್ಯೇಕ ಸ್ಥಾನವೊಂದಿರುತ್ತದೆ. ಇದೊಂದು ಅಲಿಖಿತ ನಿಯಮ. ಸ್ವಸ್ಥಾನ ಪ್ರಜ್ಞೆಯನ್ನು ರೂಢಿಸಿಕೊಂಡು, ತನ್ನ ಗಡಿ ಮೇರೆಗಳನ್ನು ತಾನಾಗಿ ಗುರುತಿಸಿಕೊಂಡು, ಅದಕ್ಕನುಗುಣವಾಗಿ ಬದುಕುವವನು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಯಾವ ಸ್ತರದಲ್ಲಿದ್ದರೂ, ಆತನೊಬ್ಬ ಸುಸಂಸ್ಕೃತ ವ್ಯಕ್ತಿ. ತನ್ನ ಸ್ಥಾನದಿಂದ ಮೇಲಿನ ಸ್ಥಾನಕ್ಕೆ ತೇರ್ಗಡೆಗೊಳ್ಳಬೇಕೆಂಬಾತ, ಅದಕ್ಕನುಗುಣವಾಗಿ ತನ್ನ ಯೋಗ್ಯತೆಯನ್ನು ಹೆಚ್ಚಿಸಿಕೊಂಡು, ಅರ್ಹತೆಯನ್ನು ಗಳಿಸಿಕೊಳ್ಳಬೇಕಾದುದು ಅನಿವಾರ್ಯ.

ಸಮಾಜದಲ್ಲಿ ವ್ಯಕ್ತಿಯ ಸ್ಥಾನಕ್ಕೆ ತಕ್ಕಂತೆ ಜವಾಬ್ದಾರಿಗಳೂ ಇರುತ್ತವೆ. 'ಸ್ವಸ್ಥಾನ ವಿವೇಚನೆಯೇ ಕರ್ತವ್ಯ ಜ್ಞಾನಕ್ಕೆ ಮಾತೃಕೆ... ಸ್ವಸ್ಥಾನದಿಂದ ಸ್ವಧರ್ಮ' ಎನ್ನುತ್ತಾರೆ ಡಿ.ವಿ.ಜಿ. ಸ್ವಸ್ಥಾನದ ಅರಿವಿನಿಂದಾಗಿ ವ್ಯಕ್ತಿ ಅತಿವಿನಯ ಹಾಗೂ ಅವಿನಯ ಎರಡರ ಅಪಾಯಗಳಿಂದಲೂ ದೂರವಿರಲು ಸಾಧ್ಯವಾಗುತ್ತದೆ. ವ್ಯಕ್ತಿಯೊಬ್ಬ ತನ್ನ ಸ್ಥಾನದ ಜವಾಬ್ದಾರಿ, ಇತಿಮಿತಿ ಹಾಗೂ ಘನತೆಗಳನ್ನು ಮರೆತು ವರ್ತಿಸಿದಾಗ, ಸಮಾಜ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ತನ್ನ ಅಸಮ್ಮತಿಯನ್ನು ವ್ಯಕ್ತಪಡಿಸುತ್ತದೆ. ಅಲ್ಲದೆ, ಹಾಗೆ ನಡೆದುಕೊಂಡ ವ್ಯಕ್ತಿಯ ಗೌರವ ಘನತೆಗಳು ಮುಕ್ಕಾಗುತ್ತವೆ. ಪ್ರಸ್ತುತ ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಹಿರಿಯರೆನ್ನಿಸಿಕೊಂಡಿರುವವರೂ ಇಂಥ ಸ್ವಸ್ಥಾನ ವಿವೇಚನೆಯಿಂದ ದೂರವಾಗುತ್ತಿರುವುದು ನಿಜಕ್ಕೂ ದೊಡ್ಡ ದುರಂತ. ಇತ್ತೀಚೆಗಷ್ಟೇ ಬಹು ದೊಡ್ಡ ಜವಾಬ್ದಾರಿಯ ಸ್ಥಾನದಲ್ಲಿರುವವ, ಮಹನೀಯರೊಬ್ಬರು ಸಾರ್ವಜನಿಕರ ಮುಂದೆ ಸಾಮಾನ್ಯಾತಿ ಸಾಮಾನ್ಯರಂತೆ ವರ್ತಿಸಿ, ತಮ್ಮ ಸ್ಥಾನ, ಅಧಿಕಾರ, ವಯಸ್ಸು, ಶಿಕ್ಷಣ– ಇತ್ಯಾದಿಗಳೆಲ್ಲವುಗಳ ಘನತೆಯನ್ನು ಗಾಳಿಗೆ ತೂರಿರುವ ಘಟನೆಯೊಂದು ನೆನಪಾಗುತ್ತದೆ. ಸಮಾಜದಲ್ಲಿ ದೊಡ್ಡವರೆನ್ನಿಸಿಕೊಂಡವರ ಮಾತು ಕೃತಿಗಳನ್ನು ಸಮಾಜ ಗಮನಿಸುತ್ತಲೇ ಇರುತ್ತದೆ. ಕಿರಿಯರು ಅಂಥವರನ್ನು ಮೇಲ್ಪಂಕ್ತಿಯಾಗಿ ಭಾವಿಸಿ, ಅನುಕರಿಸುತ್ತಾರೆ. ಹೀಗಾಗಿ ಹಿರಿಯರಿಗೆ ಲೋಕ ಶಿಕ್ಷಣದ ಬಹುದೊಡ್ಡ ಜವಾಬ್ದಾರಿ ಇರುತ್ತದೆ.

ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ।
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ॥

(ಶ್ರೇಷ್ಠರೆನ್ನಿಸಿಕೊಂಡವರು ಯಾವ ಯಾವ ಆಚರಣೆಗಳನ್ನು ಮಾಡುತ್ತಾರೋ, ಇತರರೂ ಅವನ್ನೇ ಮಾಡುತ್ತಾರೆ. ಶ್ರೇಷ್ಠರು ಯಾವುದನ್ನು ಪ್ರಮಾಣವೆಂದು ಮಾಡಿ ತೋರಿಸುತ್ತಾರೋ, ಸಮಸ್ತ ಮನುಷ್ಯ ಸಮುದಾಯವೂ ಅದಕ್ಕನುಸಾರವಾಗಿ ವರ್ತಿಸಲು ತೊಡಗುತ್ತದೆ)– ಇದು ಭಗವದ್ಗೀತೆಯ ಮಾತು. ಆದ್ದರಿಂದಲೇ ವ್ಯಕ್ತಿಗಳ ಪಾಲಿಗೆ ಸ್ಥಾನ ಪ್ರಜ್ಞೆಯೆಂಬುದು ವೈಯಕ್ತಿಕ ಘನತೆ ಗೌರವಗಳ ರಕ್ಷೆ ಮಾತ್ರವಲ್ಲದೆ, ಕರ್ತವ್ಯ ಜವಾಬ್ದಾರಿಗಳ ನಿರ್ವಹಣೆಗೆ ಸಾಧನವೂ ಹೌದು.

■ ವೈನತೇಯ

# ಮಾತೇ ಮುತ್ತು

★ ಸುಮ್ಮನಿರು ನಿನ್ನ ಪಾಡನು ಪಡುತ ತುಟಿ ಬಿಗಿದು, ನೆಮ್ಮದಿಗೆ ದಾರಿಯದು!
–ಡಿವಿಜಿ

★ ಕೆಲಸಕ್ಕೆ ಬಾರದ ಮನುಷ್ಯರು ನಿನ್ನಲ್ಲಿ ದೋಷವನ್ನೆಣಿಸಿದರೆ ಅದಕ್ಕೆ ಸ್ವಲ್ಪವೂ ಗಮನ ಕೊಡಬೇಡ; ನಿರ್ಲಕ್ಷ್ಯ, ನಿರ್ಲಕ್ಷ್ಯ, ನಿರ್ಲಕ್ಷ್ಯ!
–ಸ್ವಾಮಿ ವಿವೇಕಾನಂದ

★ ಅಡಿಗೆ ತಯಾರಿ ಹೇಗಾದರೂ ಇರಲಿ; ಅದರ ರುಚಿ ಎಂತಾದರೂ ಇರಲಿ; ಆದರೆ ಬಡಿಸುವಾಗ ಪ್ರೀತಿ ಇರಲಿ.
–ಇಂಗ್ಲೆಂಡ್ ಗಾದೆ

★ ಆತ್ಮವಿಶ್ವಾಸವುಳ್ಳವನು ಎಂದಿಗೂ ಸೋಲು ಅನುಭವಿಸುವುದಿಲ್ಲ.
–ಬೈಬಲ್

★ ವೈದ್ಯನಿಗಿಂತ ಉತ್ತಮ ಚಿಕಿತ್ಸೆಯನ್ನು 'ಮಿತ ಭೋಜನ' ನೀಡಬಲ್ಲದು.
–ವಿಲ್ ಡ್ಯೂರಂಟ್

★ ದಾನ, ಧರ್ಮಗಳು ದೇವರ ಮನೆಯ ಬಾಗಿಲೊಳಗೆ ಪ್ರವೇಶ ದೊರಕಿಸಿಕೊಡುತ್ತವೆ.
–ಕುರಾನ್

★ ಎಲ್ಲಕಿಂತ ಹೆಚ್ಚು ಬೆಲೆಬಾಳುವ ಬಂಡವಾಳ ಎಂದರೆ 'ದುಡಿಮೆ.'
–ಕಾರ್ಲ್‌ಮಾರ್ಕ್ಸ್

★ ಅವನನ್ನು ಚೆನ್ನಾಗಿ ಬಯ್ಯಬೇಕೆಂದು ಹೋದೆ; ಅವನು 'ಹೊಡೆದು ಬಿಡು ನನ್ನ' ಎಂದ. ಗೆದ್ದವರು ಯಾರು?
–ಚೆನ್ನವೀರ ಕಣವಿ

★ ನಿಜವನ್ನು ಬರೆಯುವುದು ಹೇಗೆ ಎಂಬುದೇ ಲೇಖಕನ ಸಮಸ್ಯೆ; ಆ ಸಮಸ್ಯೆಗೆ ಪರಿಹಾರ ಎಂದಿಗೂ ದೊರಕುವುದಿಲ್ಲ.
–ಅರ್ನೆಸ್ಟ್ ಹೆಮಿಂಗ್ವೆ

★ ಇನ್ನೊಬ್ಬರಿಗಾಗಿ ದುಡಿಯಿರಿ; ಆದರೆ ಅನ್ಯರ ದುಡಿಮೆಗೆ ಕೈ ಚಾಚಬೇಡಿ.
–ರಸ್ಕಿನ್

★ ನಮ್ಮ ಗುರಿ ಆಕಾಶದಷ್ಟು ಎತ್ತರವಾದದ್ದಾದರೆ, ಮರದಷ್ಟು ಎತ್ತರ ಗುರಿ ಉಳ್ಳವನಿಗಿಂತ ಹೆಚ್ಚಿನದನ್ನು ಸಾಧಿಸಬಹುದು.
–ಜಾರ್ಜ್ ಹರ್ಬರ್ಟ್

★ ಯಾವ ಗುರಿಯೂ ಇಲ್ಲದವರು, ಆಧಾರವೇ ಇಲ್ಲದೆ, ಹೆಜ್ಜೆ ಹೆಜ್ಜೆಗೂ ದಾರಿ ತಪ್ಪಬಹುದು.
–ನ್ಯೂಮನ್

★ ಕರುಣೆ, ಪ್ರೀತಿಗಳಿಂದ ಶಿಷ್ಯರನ್ನು ಒಳ್ಳೆಯ ದಾರಿಯಲ್ಲಿ ನಡೆಸುವ ಗುರು ಕಣ್ಣೆದುರಿಗೆ ಕಾಣುವ ದೇವರೇ ಹೌದು.
–ವೀಣೆ ದೊರೆಸ್ವಾಮಿ ಅಯ್ಯಂಗಾರ್

★ ಗುಲಾಮಗಿರಿ ತಪ್ಪಲ್ಲದಿದ್ದರೆ ಬೇರೆ ಯಾವುದೂ ತಪ್ಪಲ್ಲ.
–ಅಬ್ರಾಹಂ ಲಿಂಕನ್

★ ಗುಲಾಮಗಿರಿಯಲ್ಲಿ ಬೆಳೆದವರ ಆಲೋಚನೆಗಳು ಗುಲಾಮಗಿರಿಗೆ ಒಪ್ಪುವಂತೆ ಇರುತ್ತವೆ.
–ಗಳಗನಾಥ